# ಅರಸೀಕೆರೆಯ ಈಶ್ವರ ದೇವಾಲಯ

ಲೇಖಕರು: ಮೈಸೂರು ಆರ್ ಶ್ರೀನಿವಾಸ ಪುಟ್ಟಿ



ಚಾಲುಕ್ಯ ಅರಸಿಯೊಬ್ಬಳ ಹೆಸರಿನಲ್ಲಿ ಕಟ್ಟಿಸಿದ ಕೆರೆಯಿಂದ ಹೆಸರು ಪಡೆದಿರುವ ಅರಸೀಕೆರೆಯು ಹಾಸನ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಇದೊಂದು ಮುಖ್ಯ ರೈಲ್ವೆ ಜಂಕ್ಷನ್ ಆಗಿದ್ದು ಇಲ್ಲಿಂದ ಬೆಂಗಳೂರು, ಮೈಸೂರು ಹಾಗೂ ಶಿವಮೊಗ್ಗೆಗಳಿಗೆ ರೈಲು ಹಾಗೂ  ಬಸ್ ಸಂಪರ್ಕಗಳಿವೆ. ಜಿಲ್ಲಾ ಕೇಂದ್ರ ಹಾಸನವು ಕೇವಲ 45 ಕಿ.ಮೀ. ದೂರದಲ್ಲಿದ್ದು, ಅಲ್ಲಿಗೆ ಅಸಂಖ್ಯ ಬಸ್ ಗಳು ಹಾಗೂ

ಸಾಕಷ್ಟು ರೈಲುಗಳು ಲಭ್ಯವಿದೆ. **ತ್ರಿಭುವನಮಲ್ಲ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ (ಕ್ರಿಸ್ತ ಶಕ 1220 ಕ್ಕೂ ಮುಂಚೆ)** ಸಾಕಷ್ಟು ಪ್ರಸಿದ್ಧಿಗೆ ಬಂದಿದ್ದ ಊರು ಅರಸೀಕೆರೆ. ಸರಿಸುಮಾರು ಈ ಕಾಲದಲ್ಲಿಯೇ, ಅಂದರೆ ಹೊಯ್ಸಳ ದೊರೆ ಎರಡನೇ ವೀರಬಲ್ಲಾಳನ ಮಗ ಎರಡನೇ **ನರಸಿಂಹನ** ಆಳ್ವಿಕೆಯ ಕಾಲದಲ್ಲಿ **(ಕ್ರಿಸ್ತ ಶಕ 1220-1235**) ನಿರ್ಮಾಣಗೊಂಡ ಸುಂದರ **ಈಶ್ವರ ದೇವಾಲಯ**ವೊಂದು ಅರಸೀಕೆರೆಯಲ್ಲಿ ಇದೆ. ಇತರ ಹಲವಾರು ಹೊಯ್ಸಳ ದೇವಾಲಯಗಳಿಗೆ ಹೋಲಿಸಿದರೆ ಗಾತ್ರದಲ್ಲಿ ಸ್ವಲ್ಪ ಚಿಕ್ಕದು ಎನಿಸುವ ಈ ದೇವಾಲಯವನ್ನು **ಶಿವಾಲಯ** ಎಂದೂ ಕರೆಯುತ್ತಾರೆ.

ಬಹುತೇಕ ಬಳಪದ ಕಲ್ಲಿನಿಂದಲೇ ನಿರ್ಮಾಣವಾಗಿರುವ **ಶಿವಾಲಯ**ವು, ಹೊಯ್ಸಳ ದೇವಾಲಯವೊಂದರ ಬಹುಪಾಲು ಎಲ್ಲ ಲಕ್ಷಣಗಳನ್ನೂ ಹೊಂದಿದೆ. ಈ ದೇವಾಲಯಕ್ಕೆ ಒಂದು ಗರ್ಭಗೃಹ, ಶುಕನಾಸೀ, ನವರಂಗ, ದ್ವಾರಮಂಟಪ ಹಾಗೂ ಅತ್ಯಂತ ವಿಶಿಷ್ಟವಾದ ಮುಖಮಂಟಪಗಳಿವೆ. ದೇವಾಲಯದ ಗರ್ಭಗೃಹ ಹಾಗೂ ಮುಖಮಂಟಪಗಳು ನಕ್ಷತ್ರಾಕಾರವನ್ನು ಹೊಂದಿದ್ದು, ನವರಂಗ ಚೌಕಾಕಾರವಾಗಿದೆ. ಈ ದೇವಾಲಯಕ್ಕೆ ದ್ವಾರಮಂಟಪದ ಬಳಿ ಉತ್ತರ ದಕ್ಷಿಣಗಳಿಂದ ಪ್ರವೇಶವಿದೆ. ದ್ವಾರಮಂಟಪದ ಪೂರ್ವಕ್ಕೆ ಮುಖಮಂಟಪವೂ, ಮತ್ತು ಪಶ್ಚಿಮಕ್ಕೆ ನವರಂಗಗಳೂ ಇವೆ.

**ಶಿವಾಲಯವು** ಜಗತಿಯೊಂದರ ಮೇಲೆ ನಿರ್ಮಾಣವಾದಂತೆ ಕಾಣುವುದಿಲ್ಲ ; ಬದಲಾಗಿ ನೆಲದ ಮೇಲಿನ ಹಾಸುಗಲ್ಲುಗಳ ಮೇಲೆ ನಿರ್ಮಾಣವಾದಂತೆ ಕಾಣುತ್ತದೆ. ದೇವಾಲಯವು ಸುಮಾರು

ಮೂರು ಅಡಿ ಎತ್ತರದ ಅಧಿಷ್ಠಾನವನ್ನು ಹೊಂದಿದ್ದು, ಅದರ ಮೇಲ್ಭಾಗದಲ್ಲಿ ಯಕ್ಷ , ಹಂಸ ಮತ್ತು ಗೋಪುರಗಳ ಸಾಲು ಇದೆ. ಇದರ ಮೇಲೆ ಸುಮಾರು 120 ವಿಗ್ರಹಗಳು ದೇವಾಲಯವನ್ನು ಸುತ್ತುವರೆದಿದೆ. ಈ ವಿಗ್ರಹಗಳಲ್ಲಿ ಪ್ರಮುಖವಾದವುಗಳೆಂದರೆ : **ಲಕ್ಷ್ಮೀ**, **ವಿಷ್ಣು**, **ಸಪ್ತಮಾತೃಕೆಯರು**, **ಪಾರ್ವತೀ**, **ಶಿವ**, **ವಿಷ್ಣುವಿನ ದ್ವಾದಶ ಮೂರ್ತಿಗಳು**, **ಸರಸ್ವತೀ** ಮತ್ತು **ಕೇಶವ**. ಕೆಲವು ವಿಗ್ರಹಗಳ ಕೆಳಗೆ ಅವುಗಳ ಹೆಸರುಗಳನ್ನು ಕಾಣುತ್ತೇವೆ.

ಮೇಲ್ಛಾವಣಿಯ ಬೋದಿಗೆಯ ಮೇಲೆ ಮಣಿಸರ, ಮಕರ, ಕೀರ್ತಿಮುಖ ಮತ್ತು ಶಿಖರಗಳಿವೆ.

ಶಿವಾಲಯದ **ಶಿಖರವು** ಐದು ಅಂತಸ್ತುಗಳನ್ನು ಹೊಂದಿದ್ದು ೧೬ ಕೋನಗಳ ನಕ್ಷತ್ರಾಕಾರದ ರಚನೆಯಾಗಿದೆ. ಶಿಖರದ ಚಾಚಿದ ಮುಂಭಾಗದಲ್ಲಿ ಹಿಂದೆ ಸಳ ನ ವಿಗ್ರಹವಿದ್ದಿತೆಂದು ತಿಳಿದುಬರುತ್ತದೆ ಆ ಜಾಗದಲ್ಲಿ ಈಗ ಗಾರೆಯ ನಂದಿಯನ್ನು ಕಾಣಬಹುದು. ಇದರ ಮುಂಭಾಗದಲ್ಲಿ ತಾಂಡವೇಶ್ವರನ ವಿಗ್ರಹವನ್ನು ಕಾಣುತ್ತೇವೆ.

ದೇವಾಲಯದ ಒಳಭಾಗದಲ್ಲಿ ನವರಂಗದಲ್ಲಿ ಸುಂದರವಾದ ಭುವನೇಶ್ವರಿ ಗಳೂ ಮತ್ತು ಸ್ತಂಭಗಳನ್ನು ಕಾಣಬಹುದು. ಇಲ್ಲಿ ಕಾಣುವ ಮಹಿಷಮರ್ದಿನಿ ಮತ್ತು ನಂದಿ ವಿಜಯನಗರ ಕಾಲದ ವಿಗ್ರಹಗಳು. ನವರಂಗದ ನಂತರ ಪಶ್ಚಿಮಕ್ಕೆ ಕಾಣಬರುವ ಶುಕನಾಸಿಯೂ ಒಂದು ಅದ್ಭುತ ರಚನೆ. ನಂತರ ಕಂಡುಬರುವ ಗರ್ಭಗುಡಿಯಲ್ಲಿ ಸುಮಾರು ಎರಡು ಅಡಿ ಎತ್ತರದ ಲಿಂಗ ಇದೆ.

ದೇವಾಲಯ ಹಾಗೂ ಅದರ ಮುಖಮಂಟಪದ ನಡುವೆ, ಅವೆರಡರ ಸೇತುವಾಗಿ ಒಂದು ಪುಟ್ಟ ದ್ವಾರಮಂಟಪವಿದೆ. ಈ ದ್ವಾರಮಂಟಪದ ಪೂರ್ವಕ್ಕೆ ಅತ್ಯಂತ ವಿಶಿಷ್ಟವಾದ ಮುಖಮಂಟಪ ಇದೆ. ಈ ರೀತಿಯ ಮುಖಮಂಟಪ ಹೊಯ್ಸಳ ಶೈಲಿಯ ಇನ್ನಾವ ದೇವಾಲಯಲ್ಲಿಯೂ ಕಂಡುಬರುವುದಿಲ್ಲ.

**ಶಿವಾಲಯದ** ಉತ್ತರದಲ್ಲಿ ಒಂದು ಅವಳಿ ದೇವಾಲಯ ಕಂಡುಬರುತ್ತದೆ. ಈ ದೇವಾಲಯದಲ್ಲಿ ಗಮನಿಸಬೇಕಾದಂತಹ ರಚನೆಗಳೇನೊ ಕಂಡುಬರುವುದಿಲ್ಲ. ಈ ಅವಳಿ ದೇವಾಲಯದ ಗರ್ಭಗುಡಿಗಳ ದ್ವಾರಬಂಧದ ಮೇಲೆ ದ್ವಾರಪಾಲಕರನ್ನೂ ಮತ್ತು ಸ್ತ್ರೀ ಚಾಮರ ಧಾರಿಗಳನ್ನೂ ಕಾಣಬಹುದು.

**ಈಶ್ವರ** ದೇವಾಲಯದ ಶಿಲ್ಪಗಳನ್ನು ನೋಡುವ ದೃಷ್ಟಿಯಿಂದ , ದೇವಾಲಯವನ್ನು ಎಂಟು ಭಾಗಗಳಾಗಿ ವಿಂಗಡಿಸಿಕೊಂಡು ನೋಡುವುದು ಸೂಕ್ತ. ಈ ಎಂಟು ಭಾಗಗಳೆಂದರೆ :

I. ದೇವಾಲಯದ ಹೊರ ಭಿತ್ತಿ

II. ಮೇಲ್ಛಾವಣಿ ಮತ್ತು ಕೈಪಿಡಿ ಗೋಡೆ

III. ಶಿಖರ

IV. ಮಂಟಪ

V. ಮುಖಮಂಟಪ

VI. ನವರಂಗ

VII. ಶುಕನಾಸಿ ಮತ್ತು

VIII. ಗರ್ಭಗುಡಿ.

## ಹೊರಭಿತ್ತಿಯಲ್ಲಿನ ವಿಗ್ರಹಗಳು

ನವರಂಗದ ದಕ್ಷಿಣಗೋಡೆಯಿಂದ ಪ್ರಾರಂಭಮಾಡಿ ಪ್ರದಕ್ಷಿಣಾಕಾರವಾಗಿ ಚಲಿಸಿದರೆ ಕಂಡುಬರುವ ವಿಗ್ರಹಗಳು ಇಂತಿವೆ :

**ವಿ. ಸೂ** : ಚತುರ್ವಿಂಶತಿ ಮೂರ್ತಿಗಳನ್ನು ಹೊರತುಪಡಿಸಿ , ಇತರ ಮೂರ್ತಿಗಳ ಕೈನಲ್ಲಿ ಕಂಡುಬರುವ ಆಯುಧಗಳನ್ನು ಕ್ರಮವಾಗಿ ಬಲಕೆಳಗೈನಿಂದ ಪ್ರಾರಂಭಿಸಿ ಮೇಲಕ್ಕೆ ಹೋಗುತ್ತಾ, ಎಡಮೇಲುಗೈ , ನಂತರ ಅದರ ಕೆಳಗಡೆಯ ಕೈಗಳಲ್ಲಿ ಇರುವಂತೆ ನಮೂದಿಸಲಾಗಿದೆ.

| ವಿಗ್ರಹ ಸಂಖ್ಯೆ | ವಿಗ್ರಹ |
|---|---|




| | |
|---|---|
| 1 - 4 | ಇಕ್ಕೆಲಗಳಲ್ಲಿ ಪರಿಚಾರಿಕೆಯರ ನಡುವೆ ಲಕ್ಷ್ಮೀ ಮತ್ತು ವಿಷ್ಣು |




| | |
|---|---|
| 5 | ಭಗ್ನಗೊಂಡಿರುವ ಸ್ಥಾನಕ ದೇವತೆ |




| | |
|---|---|
| 6 | **ಮೂರು ಮುಖಗಳು** ಮತ್ತು ನಾಲ್ಕು ಕೈಗಳನ್ನು ಹೊಂದಿರುವ ಸ್ಥಾನಕ ಬ್ರಾಹ್ಮೀ ನಾಲ್ಕು ಕೈಗಳಲ್ಲಿ ಮೂರು ಮುರಿದಿದ್ದು, ಉಳಿದಿರುವ ಒಂದು ಕೈನಲ್ಲಿ ಪಾಶವನ್ನು ಕಾಣಬಹುದು. |




| | |
|---|---|
| 7,8 | ಸ್ಥಾನಕ **ಮಾಹೇಶ್ವರೀ** ( ಚಿಹ್ನೆಗಳು ಮುರಿದಿವೆ ) ಪಕ್ಕದಲ್ಲಿ ಪರಿಚಾರಿಕೆ. |




| | |
|---|---|
| 9,10 | ಅಕ್ಷಮಾಲ, ಅಂಕುಶ, ಶಕ್ತಿ ಮತ್ತು ಫಲಗಳನ್ನು ಹಿಡಿದಿರುವ ಮೂರು ಮುಖಗಳ **ಕೌಮಾರೀ**. ದೇವತೆಯ ಬಲಗಡೆಯಲ್ಲಿ ಪರಿಚಾರಿಕೆ. |
| 11,12 | ಪದ್ಮ, ಶಂಖ, ಚಕ್ರ ಮತ್ತು ಫಲಗಳನ್ನು ಹಿಡಿದಿರುವ ಸ್ಥಾನಕ **ವೈಷ್ಣವೀ.** ದೇವತೆಯ ಎಡಗಡೆಯಲ್ಲಿ ಪರಿಚಾರಿಕೆ. |




| | |
|---|---|
| 13,14 | ಗದಾ, ಚಕ್ರ, ಶಂಖ ಮತ್ತು ಫಲಗಳನ್ನು ಹಿಡಿದಿರುವ ಸ್ಥಾನಕ **ವಾರಾಹೀ**. ದೇವತೆಯ ಬಲಗಡೆಯಲ್ಲಿ ಪರಿಚಾರಿಕೆ. |




| | |
|---|---|
| 15,16 | ಇಕ್ಕೆಲಗಳಲ್ಲಿ ಪರಿಚಾರಿಕೆಯರನ್ನು ಹೊಂದಿರುವ ದಕ್ಷಿಣದ ಖಾಲಿ ಗೂಡು |




| | |
|---|---|
| 17,18 | ವಜ್ರ, ಅಂಕುಶ, ಪಾಶ ಮತ್ತು ಫಲಗಳನ್ನು ಹಿಡಿದಿರುವ ಇಂದ್ರಾಣೀ ದೇವತೆಯ ಎಡಗಡೆಯಲ್ಲಿ ಪರಿಚಾರಿಕೆ |




| | |
|---|---|
| 19,20 | ಕತ್ತಿ, ತ್ರಿಶೂಲ, ಪಾಶ ಮತ್ತು ಬಟ್ಟಲನ್ನು ಹಿಡಿದಿರುವ **ಚಾಮುಂಡಾ.** ದೇವತೆಯ ಬಲಗಡೆಯಲ್ಲಿ ಪರಿಚಾರಿಕೆ. |





| | |
|---|---|
| 21,22 | ಅಕ್ಷಮಾಲ, ಅಂಕುಶ, ಶಕ್ತಿ, ಮತ್ತು ಫಲಗಳನ್ನು ಹಿಡಿದಿರುವ ಸ್ಥಾನಕ **ಪಾರ್ವತೀ**.<br><br>ದೇವತೆಯ ಎಡಗಡೆಯಲ್ಲಿ ಪರಿಚಾರಿಕೆ. |




| | |
|---|---|
| 23,24 | ಅಕ್ಷಮಾಲ, ತ್ರಿಶೂಲ, ಡಮರು ಮತ್ತು ಫಲಗಳನ್ನು ಹಿಡಿದಿರುವ ಸ್ಥಾನಕ **ಶಿವ** |
| 25. | **ಲಕ್ಷ್ಮೀ** |

**ಗಮನಿಸಿ:**

1. ಲಕ್ಷ್ಮಿಯ ನಂತರ, ವಿಷ್ಣುವಿನ 24 ರೂಪಗಳನ್ನು - ಅವುಗಳನ್ನು **ಚತುರ್ವಿಂಶತಿಮೂರ್ತಿಗಳು (ಚಮೂ) ಎಂದೂ** ಕರೆಯಲಾಗುತ್ತದೆ - ಕಾಣುತ್ತೇವೆ. ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನು ಆ ದೇವತೆಯ ಕೈನಲ್ಲಿರುವ ಆಯುಧಗಳ ಕ್ರಮದಿಂದ ಗುರುತಿಸಲಾಗುತ್ತದೆ. ಈ ಮೂರ್ತಿಗಳು ಹಿಡಿದಿರುವ ಆಯುಧಗಳನ್ನು ಕ್ರಮವಾಗಿ ಬಲ ಹಿಂದಿನ ಕೈ, ಎಡ ಹಿಂದಿನ ಕೈ , ಎಡಮುಂದಿನ ಕೈ, ಮತ್ತು ಬಲ ಮುಂದಿನ ಕೈಗಳಲ್ಲಿರುವಂತೆ ನಿರ್ದೇಶಿಸಲಾಗಿದೆ. ಈ ದೇವಾಲಯದಲ್ಲಿ ಬಹುತೇಕ ಚತುರ್ವಿಂಶತಿಮೂರ್ತಿಗಳ ಕೆಳಗೆ ಆ ಮೂರ್ತಿಯ ಹೆಸರನ್ನು ತಿಳಿಸಲಾಗಿದೆ.
2. ವಿಷ್ಣುವಿಗೆ ನಾಲ್ಕು ಕೈಗಳಿದ್ದು ಅವುಗಳಲ್ಲಿ ಶಂಖ(ಶಂ), ಚಕ್ರ(ಚ), ಗದಾ(ಗ), ಪದ್ಮ(ಪ) ಗಳಿರುತ್ತದೆ. ಮುಂದೆ ಕಾಣಬರುವ ಚತುರ್ವಿಂಶತಿ ಮೂರ್ತಿಗಳಲ್ಲಿನ ಆಯುಧದ ವಿನ್ಯಾಸವನ್ನು ಆವರಣದಲ್ಲಿ ತಿಳಿಸಲಾಗಿದೆ.




| | |
|---|---|
| 26. | **ಕೇಶವ** (**ಚಮೂ ೧**) (**ಶಂ-ಚ-ಗ-ಪ**) ಶಾಸನ : ಕೇಶವ - ಮೂರ್ತಿಯ ಕೈಗಳು ಮುರಿದಿವೆ. |
| 27- 30 | ತನ್ನ ಬಲಗಡೆಯಲ್ಲಿ **ಲಕ್ಷ್ಮೀ** ಮತ್ತು ಇಕ್ಕೆಲಗಳಲ್ಲಿ **ಗರುಡ** ನೊಂದಿಗೆ ಸ್ಥಾನಕ **ನಾರಾಯಣ** (**ಚಮೂ ೨**) (**ಪ-ಗ-ಚ-ಶಂ** ) ಶಾಸನ: **ನರಾಣ.** |




| | |
|---|---|
| 31–33 | ಇಬ್ಬರು ಸ್ತ್ರೀಯರ ನಡುವೆ ಸ್ಥಾನಕ **ಮಾಧವ** (**ಚಮೂ ೩**) (**ಚ**-**ಶಂ**-**ಪ**-**ಗ**) ಶಾಸನ: **ಮಾಧವ**. |




| | |
|---|---|
| 34,35 | ಗೋವಿಂದ (ಚಮೂ ಳ) (ಗ-ಪ-ಶಂ-ಚ) ಬಲಗಡೆಯಲ್ಲಿ ಸ್ತ್ರೀ. ಶಾಸನ: ಗೋವಿಂದ |




| | |
|---|---|
| 36 - 40 | ಇಕ್ಕೆಲಗಳಲ್ಲಿ ಸ್ತ್ರೀ ಮತ್ತು ಗರುಡರ ನಡುವೆ **ವಿಷ್ಣು (ಚಮೂ ೫)** (ಪ-ಶಂ-ಚ- ಗ)<br><br>ಶಾಸನ : **ವಿಷ್ಣು**. |




| | |
|---|---|
| 41,42 | **ಮಧುಸೂದನ ( ಚಮೂ ೬ )** (**ಶಂ-ಪ-ಗ-ಚ**) ಎಡಗಡೆಯಲ್ಲಿ ಸ್ತ್ರೀ ಶಾಸನ : **ಮಧುಸೂದನ** |




| | |
|---|---|
| 43,44 | ತ್ರಿವಿಕ್ರಮ (ಚಮೂ ೭) (ಗ-ಚ-ಶಂ-ಪ ) ಬಲಗಡೆಯಲ್ಲಿ ಸ್ತ್ರೀ ಪರಿಚಾರಿಕೆ ಶಾಸನ<br><br>: ತ್ರಿವಿಕ್ರಮ |




| | |
|---|---|
| 45-49. | ವಾಮನ **(ಚಮೂ ಲ)** (ಚ-ಗ-ಪ-ಶಂ) ಇಕ್ಕೆಲಗಳಲ್ಲಿ ಸಂಗಾತಿ ಮತ್ತು ಗರುಡ<br><br>ಶಾಸನ : **ವಾಮನ.** |




| | |
|---|---|
| 50,51 | ಶ್ರೀಧರ **(ಚಮೂ ೯)** (ಚ-ಗ-ಶಂ-ಪ) ಎಡಗಡೆಯಲ್ಲಿ ಲಕ್ಷ್ಮೀ. ಶಾಸನ : ಶ್ರೀಧರ. |




| | |
|---|---|
| 52,53 | **ಹೃಷೀಕೇಶ** **(ಚಮೂ ೧೦)** (ಚ-ಗ-ಶಂ-ಪ) ಬಲಗಡೆಯಲ್ಲಿ ಲಕ್ಷ್ಮೀ. ಶಾಸನ : **ರಿಸಿಕೇಸ**. |




| | |
|---|---|
| 54 -58 | ಇಕ್ಕೆಲಗಳಲ್ಲಿ ಗರುಡ ಮತ್ತು ಸಂಗಾತಿಯ ನಡುವೆ ಪದ್ಮನಾಭ (ಚಮೂ೧೧) (ಪ-ಚ-ಗ-ಶಂ) (ಈ ವಿಗ್ರಹದ ಕೆಳಗೆ ಹೆಸರನ್ನು ನಮೂದಿಸಲಾಗಿಲ್ಲ ) |




| | |
|---|---|
| 59,60 | **ದಾಮೋದರ** (**ಚಮೂ ೧೨**) (**ಶಂ-ಗ-ಚ-ಪ**) ಎಡಗಡೆಯಲ್ಲಿ **ಲಕ್ಷ್ಮೀ**.ಶಾಸನ : **ದಾಮೋದರ** |




| | |
|---|---|
| 61,62 | **ಸಂಕರ್ಷಣ (ಚಮೂ ೧೩)** (ಶಂ-ಪ-ಚ-ಗ) ಬಲಗಡೆಯಲ್ಲಿ ಪರಿಚಾರಿಕೆ. ಶಾಸನ: **ಶಂಕರುಷಣ**. |




| | |
|---|---|
| 63-67 | ವಾಸುದೇವ ( ಚಮೂ ೧೪ ) (ಶಂ-ಚ-ಪ-ಗ) ಮೂರ್ತಿಯ ಇಕ್ಕೆಲಗಳಲ್ಲಿ ಸಂಗಾತಿ ಮತ್ತು ಗರುಡ (ಮೂರ್ತಿಯ ಹೆಸರನ್ನು ನಮೂದಿಸಿಲ್ಲ) |




| | |
|---|---|
| 68,69 | ಪ್ರದ್ಯುಮ್ನ ( **ಚಮೂ೧೫** ) (**ಶಂ-ಗ-ಪ-ಚ**) ಎಡಗಡೆಯಲ್ಲಿ ಸ್ತ್ರೀ. ಶಾಸನ : ಪ್ರದ್ಯುಮ್ನ |




| | |
|---|---|
| 70,71 | ತನ್ನ ಬಲಗಡೆಯಲ್ಲಿ ಸಂಗಾತಿಯೊಡನೆ **ಅನಿರುದ್ಧ** **(ಚಮೂ೧೯)** ( ಗ-ಶಂ-ಪ-ಚ)<br><br>ಶಾಸನ : **ಅನಿರುದ್ಧ** |




| | |
|---|---|
| 72-76 | ಇಕ್ಕೆಲಗಳಲ್ಲಿ ಸಂಗಾತಿ ಮತ್ತು ಗರುಡನ ನಡುವೆ **ಪುರುಷೋತ್ತಮ** (**ಚಮೂ ೧೭**)<br><br>(**ಪ**-**ಶಂ**-**ಗ**-**ಚ**) ಶಾಸನ : **ಪುರುಷೋತ್ತಮ** |




| | |
|---|---|
| 77,78 | ಅಧೋಕ್ಷಜ ( ಚಮೂ ೧ಲ ) (ಗ-ಶಂ-ಪ-ಚ) ಎಡಗಡೆಯಲ್ಲಿ ಸ್ತ್ರೀ. ಶಾಸನ : ಅಧೋಕ್ಷಜ |




| | |
|---|---|
| 79,80 | ತನ್ನ ಬಲಗಡೆಯಲ್ಲಿ ಸ್ತ್ರೀಯೊಬ್ಬಳೊಂದಿಗೆ ನರಸಿಂಹ (ಚಮೂ ೧೯) (ಪ-ಗ-ಶಂ-ಚ)<br><br>ಶಾಸನ : ನಾರಸಿಂಹ. |




| | |
|---|---|
| 81-85 | ಇಕ್ಕೆಲಗಳಲ್ಲಿ ಗರುಡ ಮತ್ತು ಸಂಗಾತಿಯ ನಡುವೆ **ಅಚ್ಯುತ** (**ಚಮೂ-೨೦**) (**ಪ-ಚ-ಶಂ-ಗ**) ಶಾಸನ : **ಅಚ್ಯುತ**. |




| | |
|---|---|
| 86,87 | ತನ್ನ ಎಡಗಡೆಯಲ್ಲಿ ಸ್ತ್ರೀಯೊಬ್ಬಳೊಂದಿಗೆ ಜನಾರ್ದನ (ಚಮೂ-೨೧), (ಚ-ಶಂ-ಗ-ಪ),ಶಾಸನ : ಜನಾರ್ದನ |




| | |
|---|---|
| 88-90 | ಉಪೇಂದ್ರ (ಚಮೂ ೨೨) (ಗ-ಚ-ಪ-ಶಂ) ಇಕ್ಕೆಲಗಳಲ್ಲಿ ಸ್ತ್ರೀ ಪರಿಚಾರಿಕೆಯರು<br><br>ಶಾಸನ: ಉಪೇಂದ್ರ |




| | |
|---|---|
| 91-93 | ಹರಿ (ಚಮೂ ೨೩) (ಎಡಗಡೆಯಲ್ಲಿ ಒಬ್ಬ ಸಂಗಾತಿ ಮತ್ತು ಗರುಡ. ಶಾಸನ : ಹರಿ. |




| | |
|---|---|
| 94,95 | ತನ್ನ ಎಡಗಡೆಯಲ್ಲಿ ಗರುಡನೊಂದಿಗೆ **ಕೃಷ್ಣ** (**ಚಮೂ ೨೪**) (**ಗ-ಪ-ಚ-ಶಂ**)<br><br>ಶಾಸನ: **ಕೃಷ್ಣ**. |




| | |
|---|---|
| 96-98 | ಪಾರ್ವತೀ ಮತ್ತು ಶಿವನ ನಡುವೆ ಒಬ್ಬ ಭಕ್ತ |




| | |
|---|---|
| 99,100 | ತನ್ನ ಬಲಗಡೆಯಲ್ಲಿ ಸಂಗಾತಿಯೊಂದಿಗೆ ಸ್ಥಾನಕ ದೇವನೊಬ್ಬ. |
| 101,102 | ಪರಿಚಾರಿಕೆಯೊಬ್ಬಳೊಂದಿಗೆ ಸ್ಥಾನಕ **ಸರಸ್ವತೀ** (ಅಕ್ಷಮಾಲ, ಮುರಿದ ಕೈ, ಕಬ್ಬಿನ ಜಲ್ಲೆ, ಪುಸ್ತಕ) |




| | |
|---|---|
| 103,104 | ಅಂಕುಶ ಮತ್ತು ಪಾಶವನ್ನು ಹಿಡಿದಿರುವ ಸ್ಥಾನಕ ದೇವರ ವಿಗ್ರಹ ಬಲಗಡೆಯಲ್ಲಿ ಪರಿಚಾರಕ. |




| | |
|---|---|
| 105,106 | ಉತ್ತರದ ಗೂಡು ; ಇಕ್ಕೆಲಗಳಲ್ಲಿ ಪರಿಚಾರಕರು. |




| | |
|---|---|
| 107,108 | ಸ್ಥಾನಕ ದೇವತೆ (**ಅಭಯ, ಅಂಕುಶ, ಪಾಶ, ಫಲ**) ಎಡಗಡೆಯಲ್ಲಿ ಪರಿಚಾರಿಕೆ. |





| | |
|---|---|
| 109,110 | ದೇವತೆ (ಎರಡು ಕೈಗಳು ಮುರಿದಿದ್ದು, ಉಳಿದೆರಡು ಕೈಗಳಲ್ಲಿ ಅಂಕುಶ ಮತ್ತು ಪಾಶಗಳನ್ನು ಕಾಣಬಹುದು) ಬಲಗಡೆಯಲ್ಲಿ ಪರಿಚಾರಕ. |




| | |
|---|---|
| 111,112 | ತ್ರಿಭಂಗದಲ್ಲಿ ಸ್ಥಾನಕ ದೇವತೆ. ಎಡಗಡೆಯಲ್ಲಿ ಪರಿಚಾರಕ. |




| | |
|---|---|
| 113 | ಸ್ಥಾನಕ ಪುರುಷ ದೇವತೆ ( ಒಂದು ಕೈ ಮುರಿದಿದೆ ಉಳಿದ ಕೈಗಳಲ್ಲಿ ಅಂಕುಶ,ಪಾಶ,ಫಲ) |
| 114,115 | ತ್ರಿಶೂಲ ಮತ್ತು ಸರ್ಪವನ್ನು ಹಿಡಿದಿರುವ ಸ್ಥಾನಕ ಶಿವ, ಎರಡು ಕೈಗಳು ಮುರಿದಿವೆ. |




| | |
|---|---|
| 116,117 | ಸ್ಥಾನಕ ಶಿವ, ತ್ರಿಶೂಲ ಬಿಟ್ಟು ಉಳಿದ ಆಯುಧಗಳು ಮುರಿದಿವೆ. ಬಲಗಡೆಯಲ್ಲಿ ಭಕ್ತ. |
| 118 | ಕೇಶವ |




| | |
|---|---|
| 119,120 | ಸ್ಥಾನಕ ಲಕ್ಷ್ಮೀ ( ಅಭಯ, ಶಂಖ,ಶಂಖ,ಪದ್ಮ) ಬಲಗಡೆಯಲ್ಲಿ ಪರಿಚಾರಿಕೆ. |

## ಮೇಲ್ಚಾವಣಿ ಮತ್ತು ಕೈಪಿಡಿಗೋಡೆ



ಮೇಲ್ಚಾವಣಿಯ ಬೋದಿಗೆಯ ಮೇಲೆ ಮಣಿಸರ, ಮಕರ, ಕೀರ್ತಿಮುಖ, ಮತ್ತು ಉಪಗೋಪುರಗಳಿವೆ

## ಶಿಖರ



ದೇವಾಲಯದ ಶಿಖರವು ಹದಿನಾರು ಕೋನಗಳನ್ನು ಹೊಂದಿದ್ದು ನಕ್ಷತ್ರಾಕಾರದ ರಚನೆಯಾಗಿದೆ. ಶಿಖರವು ಐದು ಅಂತಸ್ತುಗಳನ್ನು ಹೊಂದಿದ್ದು ಪ್ರತಿ ಅಂತಸ್ತಿನಲ್ಲಿಯೂ ಕೆತ್ತನೆ ಕೆಲಸಗಳಿವೆ. ಶಿಖರದ ಮೇಲ್ಭಾಗದಲ್ಲಿ ಕಲ್ಲಿನ ಕಲಶವಿದೆ. ಶಿಖರದ ಚಾಚಿದ ಮುಂಭಾಗದಲ್ಲಿ ಹಿಂದೆ ಸಳನ ವಿಗ್ರಹವಿದ್ದಿತೆಂದು ತಿಳಿದುಬಂದಿದೆ. ಆದರೆ ಈಗ ಅದು ಮಾಯವಾಗಿ, ಆ ಜಾಗದಲ್ಲಿ ಗಾರೆಯಿಂದ

ರಚಿಸಲಾದ **ನಂದಿಯನ್ನು** ಇಡಲಾಗಿದೆ. ಶಿಖರದ ಪೂರ್ವ ಮುಖದಲ್ಲಿ ತಾಂಡವೇಶ್ವರನ ವಿಗ್ರಹವನ್ನು ಕಾಣಬಹುದು.

# ಮಂಟಪ



ಈ ದೇವಾಲಯದ ಮಂಟಪವು ಅತ್ಯಂತ ವಿಶಿಷ್ಟವಾದ ರಚನೆ. ಮಂಟಪದ ಅಧಿಷ್ಠಾನವು ದೇವಾಲಯದ ಅಧಿಷ್ಠಾನದಂತೆಯೇ ಇದ್ದು ವಿಶೇಷತೆಯನ್ನೇನೂ ಹೊಂದಿಲ್ಲ. ಆದರೆ ಅಧಿಷ್ಠಾನದ ಮೇಲ್ಭಾಗದಲ್ಲಿ ಉಪಗೋಪುರಗಳಿದ್ದು, ಅದರೊಳಗೆ ಆಸೀನ ಯಕ್ಷರನ್ನು ಕಾಣಬಹುದು.

ಮಂಟಪವು ಹದಿನಾರು ಕೋನಗಳ ನಕ್ಷತ್ರಾಕಾರದ ರಚನೆಯಾಗಿದ್ದು ಸುಮಾರು 25 ಅಡಿಗಳ ಸುತ್ತಳತೆಯನ್ನು ಹೊಂದಿದೆ. ಮಂಟಪದ ಒಳಗೆ ಮಧ್ಯದಲ್ಲಿ ಅಗಲವಾದ ಜಗತಿ ಮತ್ತು ಅದರ

ಸುತ್ತಲೂ ನಾಲ್ಕು ಸ್ತಂಭಗಳು ಇವೆ. ಇವುಗಳ ಹಿಂದೆ ಕಲ್ಲಿನ ಜಗಲಿ (bench) ಇದ್ದು, ಅದರ ಕೆಳಗೆ 24 ಆನೆಗಳನ್ನು ಕಾಣಬಹುದು. ಈ ಜಗಲಿಯ ಹಿಂದೆ, ಹೊರಕ್ಕೆ ಬಗ್ಗಿರುವ ಕಟಾಂಜನವಿದೆ. ಕಲ್ಲಿನ ಜಗುಲಿಯ ಬಳಿ ಹದಿಮೂರು ಸ್ತಂಭಗಳಿದ್ದು , ದುಂಡಾಗಿವೆ. ಇದರ ನಂತರದಲ್ಲಿ ಒಳಭಾಗಕ್ಕೆ ಬರುವ ಎಂಟು ಮಧ್ಯದ ಸ್ತಂಭಗಳ ಮೇಲಿನ ತೊಲೆಗಳನ್ನು ಅಷ್ಟಕೋನದಂತೆ ರಚಿಸಿ, ಒಂದೊಂದು ಸಾಲಿನಲ್ಲೂ ಏಳು ವಿಗ್ರಹಗಳಂತೆ ಒಟ್ಟು 56 ವಿಗ್ರಹಗಳನ್ನು (8×7) ಇಟ್ಟಿರುವರು. ಇವುಗಳಲ್ಲಿ ನಂದಿಕೇಶ್ವರ, ಕುಬೇರ, ಈಶಾನ, ನರಸಿಂಹ, ಮತ್ತು ಇವುಗಳ ಪಕ್ಕಗಳಲ್ಲಿ ವಿಷ್ಣು, ಶಿವ, ದೇವಿ ವಿಗ್ರಹಗಳನ್ನು ಕಾಣಬಹುದು. ಈ ತೊಲೆಗಳ ಮೇಲೆ ಸಿಂಹಗಳ ಮಧ್ಯೆ ಗೋಪುರಗಳಿವೆ ಉತ್ತರದ ಒಂದು ಗೋಪುರದಲ್ಲಿ ಕತ್ತಿ ಮತ್ತು ಪಾತ್ರೆ ಹಿಡಿದಿರುವ ದುರ್ಗೆಯ ವಿಗ್ರಹವಿದೆ. ಇದರ ಮೇಲಿನ ಭುವನೇಶ್ವರಿಯಿಂದ ಮೂರೂವರೆ ಅಡಿ ಉದ್ದದ ಕಮಲದ ಕರ್ಣಿಕೆ ಜೋಲಾಡುತ್ತಿದೆ. ಮಂಟಪದ ಮೇಲೆ ಅಂಡಾಕಾರದ ಮೇಲ್ಛಾವಣಿಯನ್ನು ಗಾರೆಯಿಂದ ನಿರ್ಮಿಸಲಾಗಿದೆ.

## ಮುಖ ಮಂಟಪ

ದೇವಾಲಯದ ಮಂಟಪಕ್ಕೂ ನವರಂಗಕ್ಕೂ ನಡುವಿನಲ್ಲಿ ಸಣ್ಣ ಮುಖಮಂಟಪ (porch) ಇದೆ. ಇದರ ಮೇಲ್ಚಾವಣಿಯಲ್ಲಿ ಅಷ್ಟದಿಕ್ಪಾಲಕರು ಮತ್ತು ಅವರ ಸಂಗಾತಿಯನ್ನು ಕುಳಿತಿರುವ ಭಂಗಿಯಲ್ಲಿ ಕಾಣಬಹುದು. ಎಡಗಡೆಯಲ್ಲಿ ಅವರ ಪರಿಚಾರಕರನ್ನು ಕಾಣುತ್ತೇವೆ.ಅಷ್ಟದಿಕ್ಪಾಲರ ಮೇಲಿನ ಭಾಗದಲ್ಲಿ ನರ್ತಕರು ಹಾಗೂ ಸಂಗೀತಗಾರರ ಮಧ್ಯದಲ್ಲಿ ತಾಂಡವೇಶ್ವರನನ್ನು ಕಾಣುತ್ತೇವೆ.

## ನವರಂಗ



ಮುಖಮಂಟಪದ ನಂತರದಲ್ಲಿ ನವರಂಗವಿದೆ. ನವರಂಗಕ್ಕೆ ಈಗ ಪ್ರವೇಶದ್ವಾರ ವಿದೆ. ನವರಂಗವು 20 ಅಡಿ ಉದ್ದ ಮತ್ತು 20 ಅಡಿ ಅಗಲ ವಿರುವ ಒಂಬತ್ತು ಅಂಕಣದ ಕೋಣೆಯಾಗಿದೆ. ಇದರ ಗೋಡೆಯ ಮೂರು ಭಾಗಗಳಲ್ಲಿ ಗೋಪುರವುಳ್ಳ ಮೂರು ಸುಂದರ ಗೂಡುಗಳಿವೆ. ಈ ಗೂಡುಗಳಲ್ಲಿ ಹಿಂದೆ ದೇವತಾಮೂರ್ತಿಗಳು ಇದ್ದವೆಂದು ತಿಳಿದು ಬಂದಿದೆ. ಆದರೆ ಈಗ ಈ ಗೂಡುಗಳು ಬರಿದಾಗಿವೆ. ನವರಂಗದ ಸ್ತಂಭಗಳು ಕೆಳಗಡೆ ಯಕ್ಷ, ಅದರ ಮೇಲೆ ತೋರಣಗಳ ಕೆಳಗೆ - ವಿಷ್ಣು, ಶಿವ, ಮತ್ತು ದೇವಿ ವಿಗ್ರಹಗಳನ್ನು ಹೊಂದಿವೆ. ಸ್ತಂಭಗಳ ಮೇಲ್ಭಾಗದಲ್ಲಿ ಸಿಂಹ

ಮುಖಗಳಿವೆ. ನವರಂಗದಲ್ಲಿ ಒಂಬತ್ತು **ಭುವನೇಶ್ವರಿ**ಗಳಿದ್ದು, ಮಧ್ಯದ ಭುವನೇಶ್ವರಿಯ ಪಶ್ಚಿಮ ಭಾಗದಲ್ಲಿ **ಏಕಾದಶ ರುದ್ರರು**, ಪೂರ್ವ ಭಾಗದಲ್ಲಿ **ದ್ವಾದಶ ಆದಿತ್ಯರು**, ಉತ್ತರ-ದಕ್ಷಿಣಗಳಲ್ಲಿ **ವಿಷ್ಣುವಿನ ಚತುರ್ವಿಂಶತಿ ಮೂರ್ತಿ**ಗಳು, ಮತ್ತು ಇತರ ಭುವನೇಶ್ವರಿಗಳಲ್ಲಿ ರೇಖಾ ಚಿತ್ರಗಳು ಇವೆ. ನವರಂಗದಲ್ಲಿ ಕಂಡುಬರುವ ಮಹಿಷಮರ್ದಿನಿ ಮತ್ತು ನಂದಿ ವಿಗ್ರಹಗಳು **ವಿಜಯನಗರ** ಕಾಲದ್ದಾಗಿವೆ.

## ಶುಕನಾಸಿ

ಶುಕನಾಸಿಯ ಮೇಲ್ಹಾವಣಿಯಲ್ಲಿ ಎರಡುಸಾಲು ಚಿತ್ರ ಪಟ್ಟಿಕೆಗಳಿವೆ. ಇವುಗಳಲ್ಲಿ ಕೆಳಗಿನ ಸಾಲಿನಲ್ಲಿ ಒಬ್ಬ ಋಷಿಯು ಪಾಂಡವರಿಗೆ ಪುಸ್ತಕದ ಸಹಾಯದಿಂದ ಪುರಾಣವನ್ನು ಹೇಳುತ್ತಿರುವ ಚಿತ್ರವಿದೆ. ಪಾಂಡವರ ಪಕ್ಕದಲ್ಲಿ ಕೃಷ್ಣನನ್ನು ಕಾಣಬಹುದು ಇದಲ್ಲದೇ ಶುಕನಾಸಿಯಲ್ಲಿ ಕೆಳಗೆ ತಿಳಿಸಿರುವ ಶಿಲ್ಪಗಳನ್ನು ಕಾಣಬಹುದು:

| | |
|---|---|
| ದಕ್ಷಿಣ ಮತ್ತು ನೈರುತ್ಯ (**south and southwest** ) | **ಸಂಗೀತಕ್ಕೆ ನರ್ತಿಸುತ್ತಿರುವ ಬಾಲೆ** |
| ಪಶ್ಚಿಮ | **ದ್ರೋಣಾಚಾರ್ಯ**ರಿಂದ **ಪಾಂಡವ**ರಿಗೆ ಬೋಧನೆ |
| ವಾಯವ್ಯ ( **North - west** ) | **ಪಾಂಡವ** - **ಕೌರವ**ರಿಂದ ಅಕ್ಷದ್ಯೂತ **( Pandavas and Kauravas at the dice )** |
| ಉತ್ತರ | **ದುಶ್ಯಾಸನನ** ಕರುಳನ್ನು ಬಗೆಯುತ್ತಿರುವ **ಭೀಮ** ಮತ್ತು ಆ ಕರುಳಿನಿಂದ ತನ್ನ ತಲೆಯನ್ನು ಸಿಂಗರಿಸಿ ಕೊಳ್ಳುತ್ತಿರುವ **ದ್ರೌಪದೀ** |
| ಈಶಾನ್ಯ ( **North - east** ) | ಜಿಂಕೆಗಳ ಮಾನವರೂಪಿ ಮುಖಂಡ ನೊಬ್ಬ ( **An anthropoid leader** ) , ಮನುಷ್ಯ ನೊಡನೆ ಯುದ್ಧಮಾಡಿ ಯಜ್ಞಮಾಡುತ್ತಿರುವನು |

ಶುಕನಾಸಿಯ ಮೇಲ್ಹಾವಣಿಯ ಮೇಲಿನ ಚಾವಣಿಯಲ್ಲಿ ಕಂಡುಬರುವ ಶಿಲ್ಪಗಳು ಇಂತಿವೆ :

| | |
|---|---|
| ಪೂರ್ವ | ಸಮುದ್ರ ಮಥನ, ಅಮೃತ ಪಾನ ಮಾಡುತ್ತಿರುವ ದೇವತೆಗಳು |
| ದಕ್ಷಿಣ | ಶಿವತಾಂಡವ |
| ಪಶ್ಚಿಮ | ತನ್ನ ಪರಿವಾರದೊಡನೆ ನಿಂತಿರುವ ಶಿವ |
| ಉತ್ತರ | ವಜ್ರಾಯುಧ ಮತ್ತು ಫಲವನ್ನು ಹಿಡಿದು ಕುಳಿತಿರುವ ದೇವತೆ. |

ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರಿಂದ ಸುತ್ತುವರಿಯಲ್ಪಟ್ಟಿರುವ ತಾಂಡವೇಶ್ವರ.

# ಗರ್ಭಗುಡಿ



ಗರ್ಭಗುಡಿಯ ದ್ವಾರದಲ್ಲಿನ ಕೆತ್ತನೆ ಕೆಲಸಗಳು ಬಹಳ ಸುಂದರವಾಗಿವೆ. ದ್ವಾರಬಂಧದಲ್ಲಿ ದ್ವಾರಪಾಲಕರು, ಲತಾ ಸಿಂಹಗಳು, ಮೇಲೆ ಗಜಲಕ್ಷ್ಮೀ, ಅದರ ಮೇಲೆ ಶಿವ, ಶಿವನ

ಬಲಗಡೆಯಲ್ಲಿ ಗಣೇಶ ಮತ್ತು ಬ್ರಹ್ಮ, ಎಡಗಡೆಯಲ್ಲಿ ಷಣ್ಮುಖ ಮತ್ತು ವಿಷ್ಣುವನ್ನು ಕಾಣಬಹುದು. ಗರ್ಭಗುಡಿಯ ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರು, ನರ್ತಕರು ಮತ್ತು ಮಧ್ಯದಲ್ಲಿ ತಾಂಡವೇಶ್ವರ ಇದೆ. ತಾಂಡವೇಶ್ವರನು ಸಂಗೀತಗಾರರಿಂದ ಸುತ್ತುವರೆಯಲ್ಪಟ್ಟಿದ್ದಾವೆ. ಗರ್ಭಗುಡಿಯಲ್ಲಿನ ಲಿಂಗವು, ನೆಲದಿಂದ ಸುಮಾರು ಎರಡು ಅಡಿ ಎತ್ತರವಿದೆ.

ಗ್ರಂಥಋಣ: Mysuru Archeological Report